ಅಸಲು ದಾವಾ ಸಂಖ್ಯೆ 559/2022

ಪಿ.ಡಬ್ಲ್ಯು:1

**ದಿನಾಂಕ 04.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು : ಶ್ರೀ. ಕೆ.ಎ. ಪ್ರತಿವಾದಿ ಪರ ವಕೀಲರಿಂದ**

ನಾನು ಬೀರೂರಿನ ಹೊಸ ಅಜ್ಜಂಪುರ ರಸ್ತೆಯ ಬಳಿ ವಾಸವಿದ್ದೇನೆ. ನಾನು ದಾವಾ ಸ್ವತ್ತನ್ನು ಸೈಯದ್ ಫಯಾಜ್, ಸೈಯದ್ ಗೌಸ್, ಸೈಯದ್ ಸತ್ತರ್ ರವರಿಂದ ಖರೀದಿಸಿದ್ದೆ. ಸದರಿ ಸ್ವತ್ತು ಹೊಸ ಅಜ್ಜಂಪುರ ರಸ್ತೆಯ ಬಳಿ ಇದೆ. ಸದರಿ ರಸ್ತೆ ಪ್ರಸ್ತುತ ರಾಷ್ಟ್ರೀಯ ಹೆದ್ದಾರಿಯಾಗಿದೆ ಎಂದರೆ ಸರಿ. ದಾವಾ ಸ್ವತ್ತು ಸದರಿ ರಸ್ತೆಯ ಪೂರ್ವ ಭಾಗದಲ್ಲಿದೆ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಖರೀದಿಸುವ ಕಾಲಕ್ಕೆ ದಾವಾ ಸ್ವತ್ತಿನ ಖಾತೆಯು ಸೈಯದ್ ಫಯಾಜ್ ಹಾಗೂ ಉಳಿಕೆ ಮೂರು ಜನರ ಹೆಸರುಗಳಲ್ಲಿತ್ತು. ನನ್ನ ಮಾರಾಟಗಾರರ ಹೆಸರಿನಲ್ಲಿದ್ದ ಖಾತಾ ಪ್ರತಿಯನ್ನು ಹಾಜರುಪಡಿಸಿದ್ದೇನೆ.

ಸೈಯದ್ ಫಯಾಜ್ ರವರಿಗೆ ಸದರಿ ಸ್ವತ್ತು ಹೇಗೆ ಬಂದಿದೆ ಎಂದು ನಾನು ವಿಚಾರಿಸಿಲ್ಲ. ಸೈಯದ್ ಫಯಾಜ್ ನನ್ನ ತಂದೆ. ಸೈಯದ್ ಫಯಾಜ್ ರವರ ತಂದೆಯ ಹೆಸರು ಸೈಯದ್ ಉಮರ್. ಸೈಯದ್ ಉಮರ್ ನನ್ನ ಅಜ್ಜ. ಸದರಿ ಸ್ವತ್ತಿನ ವಿಸ್ತೀರ್ಣ 30 X 30 ಅಡಿಗಳು. ನಾನು ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಆ ಸ್ವತ್ತು ಯಾರಿಗೆ ಸೇರಿದ್ದು ಎಂದು ವಿಚಾರಿಸಿಲ್ಲ. ಸೈಯದ್ ಉಮರ್ ರವರ ತಂದೆಯ ಹೆಸರು ಸೈಯದ್ ರಸುಲ್‌ಸಾಬ್ ಎಂದರೆ ಗೊತ್ತಿಲ್ಲ. ಸೈಯದ್ ರಸುಲ್‌ಸಾಬ್ ರವರಿಗೆ ಅಜ್ಜಂಪುರ ರಸ್ತೆಯಲ್ಲಿ ಪೂರ್ವ–ಪಶ್ಚಿಮ 30 ಅಡಿ ಮತ್ತು ಉತ್ತರ–ದಕ್ಷಿಣ 60 ಅಡಿ ನಿವೇಶನ ಇತ್ತು ಎಂದರೆ ನನಗ ಗೊತ್ತಿಲ್ಲ.

ಸೈಯದ್ ಫಯಾಜ್ ರವರಿಗೆ ಮೂರು ಜನ ಮಕ್ಕಳು. ಸೈಯದ್ ರಸೂಲ್‌ಸಾಬ್ ರವರಿಗೆ ಎಷ್ಟು ಜನ ಮಕ್ಕಳು ಗೊತ್ತಿಲ್ಲ. ಸದರಿ ಸೈಯದ್ ರಸೂಲ್‌ಸಾಬ್ ಮರಣಾ ನಂತರ 1986 ರಲ್ಲಿ 1 ನೇ ಪಾರ್ಟಿಯಾಗಿ ಸೈಯದ್ ರಸೂಲ್ ಸಾಬ್ ರವರ ಮಗನ ಮಕ್ಕಳಾದ ಸೈಯದ್ ಆರೀಫ್, ಸೈಯದ್ ಮುನೀರ್, ಸೈಯದ್ ಜಬಿವುಲ್ಲಾ, ಸೈಯದ್ ರಸೂಲ್ ಸಾಬ್ 2 ನೇ ಮಗ ರವರ ಸೈಯದ್ ಅಹಮ್ಮದ್ ಹಾಗೂ ಆತನ ಮೂರನೆ ಮಗ ಸೈಯದ್ ಅಬ್ಬಾಸ್ ರವರು ಹಾಗೂ ಸೈಯದ್ ರಸೂಲ್ ಸಾಬ್ ರವರ ಮೂರನೆ ಮಗ ಸೈಯದ್ ಉಮರ್ 2 ನೇ ಪಕ್ಷಗಾರರಾಗಿ ಹಾಗೂ ಸೈಯದ್ ರಸೂಲ್ ಸಾಬ್ ರವರ 4 ನೇ ಮಗ ಸೈಯದ್ ಆರೊನ್ ರಶೀದ್ ರವರು 3 ನೇ ಪಕ್ಷಗಾರರಾಗಿ ದಿಃ 24.01.1986 ರಲ್ಲಿ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದರು ಎಂದರು ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಲ್ಲಿ 1 ನೇ ಪಕ್ಷಗಾರರಿಗೆ ಪೂರ್ವ–ಪಶ್ಚಿಮ 30 ಅಡಿ ಮತ್ತು ಉತ್ತರ–ದಕ್ಷಿಣ 36 ಅಡಿ ನಿವೇಶನ ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ನನ್ನ ಅಜ್ಜ 2 ನೇ ಮಗ ಉಮರ್ ರವರಿಗೆ ಪೂರ್ವ–ಪಶ್ಚಿಮ 30 ಅಡಿ ಮತ್ತು ಉತ್ತರ–ದಕ್ಷಿಣ 12 ಅಡಿ ನಿವೇಶನ ನೀಡಲಾಗಿತ್ತು ಎಂದರೆ ಗೊತ್ತಿಲ್ಲ. 3 ನೇ ಪಕ್ಷಗಾರರಿಗೆ ಪೂರ್ವ–ಪಶ್ಚಿಮ 30 ಅಡಿ ಮತ್ತು ಉತ್ತರ–ದಕ್ಷಿಣ 12 ಅಡಿ ನಿವೇಶನ ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಈ ರೀತಿ ವಿಭಾಗ ಆಗಿದ್ದರೂ ಸಹ ನನ್ನ ಅಜ್ಜ ಪುರಸಭೆಗೆ ಸುಳ್ಳು ಮಾಹಿತಿ ನೀಡಿ ಪೂರ್ವ–ಪಶ್ಚಿಮ 30 ಅಡಿ ಮತ್ತು ಉತ್ತರ–ದಕ್ಷಿಣ 30 ಅಡಿಗಳ ನಿವೇಶನಕ್ಕೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪೂರ್ವ–ಪಶ್ಚಿಮ 30 ಅಡಿ ಮತ್ತು ಉತ್ತರ–ದಕ್ಷಿಣ 60 ಅಡಿಗಳ ನಿವೇಶನದ ದಕ್ಷಿಣ ಭಾಗದಲ್ಲಿ ಕನ್ಸರ್ವೆನ್ಸಿ ರಸ್ತೆ ಇದೆ ಎಂದರೆ ಸರಿ. ಸದರಿ ಕನ್ಸರ್ವೆನ್ಸಿ ರಸೆಯನ್ನು ಕಬಳಿಸಲು ನನ್ನ ಅಜ್ಜ ಮತ್ತು ನನ್ನ ತಂದೆ ಸುಳ್ಳು ಖಾತೆ

ನೋಂದಾಯಿಸಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಹೆಚ್ಚುವರಿ ಖಾತೆ ನೋಂದಾಯಿಸಿದ್ದರಿಂದ ಸದರಿ ನಿವೇಶನದಲ್ಲಿ ಹಕ್ಕು ಸ್ಥಾಪಿಸಿದ್ದರಿಂದ ಅಲ್ಲಿನ ವಾರ್ಡ್ ಸದಸ್ಯರಿಗೆ ತೊಂದರೆ ಆಗುತ್ತಿತ್ತು ಎಂದರೆ ಸರಿಯಲ್ಲ. ಆ ರೀತಿ ರಸ್ತೆಯನ್ನು ಕಬಳಿಸುತ್ತಿದ್ದಾರೆ ಎಂದು 7 ಮತ್ತ 8 ನೇ ವಾರ್ಡಿನ ಸದಸ್ಯರು ದೂರು ನೀಡಿದ್ದರು ಎಂದರೆ ಸರಿಯಲ್ಲ. ಸದರಿ ಹೆಚ್ಚುವರಿ ವಿಸ್ತೀರ್ಣಕ್ಕೆ ನಾವು ಬೇಲಿ ಹಾಕಲು ಪ್ರಯತ್ನಿಸಿದಾಗ ಆ ವಾರ್ಡಿನ ಸದಸ್ಯರಿಗೆ ತೊಂದರೆಯಾಗುತ್ತಿತ್ತು ಎಂದರೆ ಸರಿಯಲ್ಲ. ನಂತರ ನಾವು ಹೆಚ್ಚುವರಿ ವಿಸ್ತೀರ್ಣಕ್ಕೆ ಬೇಲಿ ಹಾಕಲು ಪ್ರಯತ್ನಿಸಿದಾಗ ದಾಖಲೆಗಳನ್ನು ಹಾಜರುಪಡಿಸುವಂತೆ ಪ್ರತಿವಾದಿಯು ನಮ್ಮನ್ನು ಕೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾವು ಪುರಸಭೆಗೆ ದಾಖಲೆಗಳನ್ನು ಸಲ್ಲಿಸದೆ, ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಮೊದಲು ನನ್ನ ಮುತ್ತಜ್ಜನಿಂದ ನನ್ನ ಅಜ್ಜನಿಗೆ, ನಂತರ ನನ್ನ ಅಜ್ಜನಿಂದ ನನ್ನ ತಂದೆಗೆ, ಆ ನಂತರ ನನ್ನ ತಂದೆಯಿಂದ ನನಗೆ ಕ್ರಯಪತ್ರವಾಗಿ ಬಂದಿದೆ ಎಂದರೆ ಸರಿ. ಈ ಬಗ್ಗೆ ಪುರಸಭೆಗೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯಿಂದ ಪಡೆದ ಕ್ರಯಪತ್ರವನ್ನು ಪುರಸಭೆಗೆ ನೀಡಿದ್ದೇನೆ. ನನ್ನ ತಂದೆಯ ಹೆಸರಿನಲ್ಲಿದ್ದ ಈ-ಸ್ವತ್ತನ್ನು ಪುರಸಭೆಗೆ ಹಾಜರುಪಡಿಸಿದ್ದೇನೆ. ಆ ರೀತಿ ಹಾಜರುಪಡಿಸಿ ಪುರಸಭೆಯಿದ ಸ್ವೀಕೃತಿ ಪಡೆದಿಲ್ಲ. ನಾನು ಯಾವುದೇ ದಾಖಲೆಗಳನ್ನು ಪುರಸಭೆಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಕ್ರಯಪತ್ರ, ಈ-ಸ್ವತ್ತು ಹಾಜರುಪಡಿಸಿದ್ದೇನೆ. ನಾನು ನಿಪಿ-1 ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುತ್ತಜ್ಜ ಮತ್ತು ನನ್ನ ಪೂರ್ವಿಕರಿಗೆ ದಾವಾ ಸ್ವತ್ತು ಹೇಗೆ ಬಂದಿದೆ ಎಂದು ದಾಖಲೆಗಳನ್ನು ಹಾಜರುಪಡಿಸಲು

ತೊಂದರೆ ಇಲ್ಲ. ನಾವು ಕನ್ಸರ್ವೆನ್ಸಿ ರಸ್ತೆಯನ್ನು ಅತಿಕ್ರಮಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿಯು ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚುವರಿ ಖಾತೆಯನ್ನು ನಮೂದಿಸಿರುವುದು ಮರೆಮಾಚಲು ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿ, ಅದರಲ್ಲಿ ಸುಳ್ಳು ಚೆಕ್ಕುಬಂದಿಯನ್ನು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಪುರಸಭೆಯವರು ನಮಗೆ ಸೇರಿದ 12 X 30 ಅಡಿಗಳ ಸ್ವತ್ತಿನಲ್ಲಿ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

**Sd/-04.06.26**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕಡೂರು.